# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 50/2021**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 28-10-2024 ರಂದು ಪ್ರಮಾಣ ಮಾಡಿಸಲಾಯಿತು

| | | | |
|---|---|---|---|
| ಸಾಕ್ಷಿಯ ಹೆಸರು | ಃ | ವರುಣ ಕಂದಪಾಲ್ | ಪ್ರಾ.ಸಾ ಃ 1 |
| ತಂದೆ ಃ ಗಂಡ ಹೆಸರು | ಃ | ಜನಾರ್ಧನ | ಚಾ.ಸಾ ಃ 1 |
| ವಯಸ್ಸು | ಃ | 36 ವರ್ಷ | |
| ಉದ್ಯೋಗ | ಃ | ಶಾಖಾ ವ್ಯವಸ್ಥಾಪಕರು, ಎಸ್ ಬಿ ಐ ಎತ್ತೇರಿ ಬೈಂದೂರು, ಉಡುಪಿ ಜಿಲ್ಲೆ | |
| ವಾಸಸ್ಥಳ | ಃ | ಬೈಂದೂರು | |

**ಮುಖ್ಯ ವಿಚಾರಣೆ ಃ ಎ ಪಿ ಪಿ ಅವರಿಂದಃ**

ನಾನು ಅಗಸ್ಟ 2016 ರಿಂದ ಅಕ್ಟೋಬರ್ 2017 ರ ವರೆಗೆ ಎಸ್ ಬಿ ಎಂ ಬ್ಯಾಂಕಿನ ಕಲಘಟಗಿ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯನಿರ್ಹಿಸಿದ್ದೇನೆ.

ನಾನು ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯಕ್ಕೆ ಹಾಜರಾದಾಗ ಪ್ರಣಯ ಬೈಸಾರಿ ಇವರಿಂದ ಪ್ರಭಾರ ವಹಿಸಿಕೊಂಡಿದ್ದು ಸದರಿಯವರು **3** ನೇ ಆರೋಪಿಯಿಂದ ಪ್ರಭಾರ ವಹಿಸಿಕೊಂಡಿದ್ದರು. ನಾನು ಬ್ಯಾಂಕಿನ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ **10** ಕಾರ ಲೋನಗಳಿಗೆ ಸಂಬಂಧಿಸಿದ ದಾಖಲೆಗಳಲ್ಲಿ ಹಣ ಮರುಪಾವತಿ ಆಗಿಲ್ಲ ಎಂದು ಗೊತ್ತಾಯಿತು. ಆದ್ದರಿಂದ ದಾಖಲೆಗಳನ್ನು ಪರಿಶೀಲಿಸಲಾಗಿ ಅವುಗಳಲ್ಲಿ ವಿಮಾ ಪಾಲಸಿ, ಇನ್ವಯಸ್, ಆರ್ ಸಿ ದಾಖಲೆಗಳು ಇರಲಿಲ್ಲ. **1** ನೇ ಆರೋಪಿಯು ನಮ್ಮ ಬ್ಯಾಂಕಿನಿಂದ ರೂ **6** ಲಕ್ಷ ವಾಹನ ಖರೀದಿ ಸಾಲ ಪಡೆದಿದ್ದರು. ಸದರಿ ಸಾಲಕ್ಕೆ **2** ನೇ ಆರೋಪಿ ಜಾಮೀನದಾರನಾಗಿದ್ದ. ಸಾಲಗಾರರಿಗೆ ನೋಟೀಸ ನೀಡಿದ್ದು ಅವು ಜಾರಿಯಾಗದೆ ಮರಳಿ ಬಂದಿರುತ್ತದೆ. ಆದ್ದರಿಂದ ನಾನು ಖುದ್ದಾಗಿ ಸಾಲಗಾರರ ಮನೆಗೆ ಬೇಟಿ ನೀಡಿರುತ್ತೇನೆ. ನಾನು ಬೇಟಿ ನೀಡಿದ ಸಮಯದಲ್ಲಿ ಸಾಲ ಪಡೆದುಕೊಂಡ ಕಾರ ಇರಲಿಲ್ಲ. ಆದ್ದರಿಂದ ಬ್ಯಾಂಕಿಗೆ ಮೋಸ ಮಾಡಿ ಸಾಲ ಪಡೆದುಕೊಂಡಿದ್ದಾರೆಂದು ಖಚಿತವಾಗಿರುತ್ತದೆ. ಕಾರ ಮಾರಾಟಗಾರ ಕಂಪನಿಗೆ ರೇವಣಕರ ಮೋಟರ್ಸ ಪ್ರಾ. ಲಿ ಹುಬ್ಬಳ್ಳಿ ಇವರಿಗೆ ಪತ್ರ ಬರೆದಿರುತ್ತೇನೆ ಹಾಗೂ ದಾಖಲೆ ನೀಡುವಂತೆ ಕೊರುತ್ತೇ. ಸದರಿಯವರು ಯಾವುದೆ ದಾಖಲೆಯನ್ನು ಹಾಜರ ಪಡಿಸಿರುವುದಿಲ್ಲ. ಈ ಬಗ್ಗೆ ಬ್ಯಾಂಕಿನ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿರುತ್ತೇನೆ. ಮೇಲಾಧಿಕಾರಿಗಳು ನನಗೆ ದೂರು ನೀಡುವಂತೆ ಸೂಚಿಸಿರುತ್ತಾರೆ. ಆ ಪ್ರಕಾರ ನಾನು ನಮ್ಮ ವಕೀಲರ ಮೂಲಕ ದಿನಾಂಕ **13.01.2017** ರಂದು ಖಾಸಗಿ ದೂರು ಸಲ್ಲಿಸಿರುತ್ತೇನೆ. ದೂರನ್ನು ನಿಪಿ**-1**, ಸಾಕ್ಷಿ ಸಹಿ ನಿಪಿ**-1**(ಎ) ಎಂದು ಗುರುತಿಸಲಾಯಿತು.

ದೂರನ್ನು ಪೋಲೀಸರಿಗೆ ತನಿಖೆಗಾಗಿ ವಹಿಸಿಕೊಟ್ಟಿದ್ದು, ಪೋಲೀಸರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ವಿಚಾರಣೆ ಮಾಡಿರುತ್ತಾರೆ. ತನಿಖೆಗಾಗಿ ಪೋಲಿಸರು ನಮ್ಮ ಬ್ಯಾಂಕಿಗೆ ಬಂದು ದಿನಾಂಕ 20.05.2017 ರಂದು ಪಂಚನಾಮೆ

ಜರುಗಿಸಿರುತ್ತಾರೆ. ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ. ದಿನಾಂಕ 31.10.2017 ರಂದು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾಧಿಕಾರಿ ಮುಂದೆ ಹಾಜರ ಪಡಿಸಿದ್ದು ಅವುಗಳನ್ನು ಪಂಚನಾಮೆ ಮೂಲಕ ಜಪ್ತಿಪಡಿಸಿಕೊಂಡಿರುತ್ತಾರೆ. ಪಂಚನಾಮೆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ದಾಖಲೆಗಳ ಜಪ್ತಿ ಪಂಚನಾಮೆಯನ್ನು ನಿಪಿ-2, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ಪೋಲೀಸರಿಗೆ ನೀಡಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ನಮ್ಮ ಬ್ಯಾಂಕ ಶಾಖೆಗೆ ನೀಡಿದಸಾಲದ ಅರ್ಜಿ ಹಾಗೂ ಇತರೆ 8 ಪುಟಗಳ ದಾಖಲೆಗಳನ್ನು ಒಟ್ಟಾಗಿ ನಿಪಿ-4, ಸಾಲ ಮಂಜೂರು ಮಾಡಿದ ಆದೇಶದ ಪ್ರತಿ 3 ಪುಟಗಳ ದಾಖಲೆಗಳನ್ನು ನಿಪಿ-5, ವಾಹನ ಒಪ್ಪಂದ ಪ್ರತಿ ಹಾಗೂ ಇ-ಸ್ಟ್ಯಾಂಪ ಪ್ರತಿಗಳು ಒಟ್ಟು 5 ಪುಟಗಳು ನಿಪಿ-6, ಸಾಲದ ಜಾಮೀನು ಒಪ್ಪಂದ ಪ್ರತಿ ಒಟ್ಟು 4 ಪುಟಗಳು ನಿಪಿ-7, 1 ಮತ್ತು 2 ನೇ ಆರೋಪಿತರ ಗುರುತಿನ ದಾಖಲೆಗಳ ಒಟ್ಟು 22 ಪುಟಗಳ ದಾಖಲೆಗಳನ್ನು ನಿಪಿ-8, ರೇವಣಕರ ಮೋಟರ್ಸ ರವರು ನೀಡಿದ ಒಟ್ಟು 2 ಪುಟಗಳ ದಾಖಲೆಯನ್ನು ನಿಪಿ-9, ಆರೋಪಿಗೆ ನೀಡಿದ ದಾಖಲೆಗಳ ಒಟ್ಟು 6 ಪುಟಗಳ ದಾಖಲೆಯನ್ನು ನಿಪಿ-10, ಸಿವಿಲ್ ವರದಿಯನ್ನು ಒಟ್ಟು 3 ಪುಟಗಳ ವರದಿಯನ್ನು ನಿಪಿ-11, ಫಾರಂ ನಂ 29, 30 ಇವುಗಳಿಗೆ ಸಂಬಂಧಿಸಿದ ಒಟ್ಟು 7 ಪುಟಗಳ ದಾಖಲೆಗಳನ್ನು ನಿಪಿ-12, ಕಾರ ಲೋನಗೆ ಸಂಬಂಧಿಸಿದ ದಾಖಲೆಗಳನ್ನು ಒಟ್ಟು 23 ಪುಟಗಳು ನಿಪಿ-13, ನಮ್ಮ ಬ್ಯಾಂಕಿನ ಸಿಬ್ಬಂದಿಯ ಮಾಹಿತಿ ಪತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು. ಸಿ

ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ ನನ್ನನ್ನು ವಿಚಾರಣೆ ಮಾಡಿ ಪುರವಣಿಗೆ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ.

ಈ ಎಲ್ಲಾ ಸಂಗತಿಗಳಿಂದ ಆರೋಪಿತರು ಕಾರು ಖರೀದಿಸುವ ಉದ್ದೇಶ ಹೊಂದದೆ ಕಾರು ಖರೀದಿಸುವ ಸಲುವಾಗಿ ಎಂದು ಹೇಳಿ ಬ್ಯಾಂಕಿನಿಂದ ಸಾಲ ಪಡೆದು ಮೋಸವೆಸಗಿರುತ್ತಾರೆ.

**ಪಾಟೀ ಸವಾಲುಃ**

**(ಕಾಲವಕಾಶ ಕೋರುತ್ತಿದ್ದು ಕಾಲಾವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**

*CC No. 50 /2021*
*PW-01*